## ದೃಶ್ಯ: ಮೂರು

ಇಂದು ಕುಸಿದ ದವಾಖಾನೆಯ ಅಡಿಯಲ್ಲಿ
ಕೋಮಲವಾದ ಪಾದ ಸಿಕ್ಕಿತು
ಒದ್ದೆಯಾದ ನನ್ನ ಕಣ್ಣು ಹೇಳಿತು
ಅದು ಅವನ ಹೂವಿನಂಥ ಪಾದ
ಇದೇ ಪಾದಗಳು ನನ್ನ ಬಸಿರಿಗೆ ಮೆಲ್ಲಗೆ ತಾಗುತ್ತಿದ್ದವು
ಮುಂಜಾನೆಯ ಎಳೆಬಿಸಿಲಿನ ಶಾಖದ
ಅವನ ಪಾದಗಳ ಹಿತದ ಸ್ಪರ್ಶ ನನ್ನ ಒಡಲು ಬಲ್ಲದು.



## ದೃಶ್ಯ: ನಾಲ್ಕು

ನನ್ನ ಎಳೆಗೂಸಿನ ಕಣ್ಣುಗಳು
ಉದುರಿಬಿದ್ದಿವೆ ಈ ಮಣ್ಣೊಳಗೆ
ನನ್ನ ಬೊಗಸೆಗೆ ಸಿಗಬಹುದು ಎಂದು ಹುಡುಕುತ್ತಿದ್ದೇನೆ
ಅವನ ನದಿಯಂಥ ಕಣ್ಣುಗಳನ್ನು
ಅವನ ಕಣ್ಣುಗಳು ನನ್ನ ಗುರುತಿಸುತ್ತವೆ
ಆ ಕಣ್ಣುಗಳು ಹುಟ್ಟಿದ ಕ್ಷಣವೆ ಮೊದಲು ನೋಡಿದ್ದು ನನ್ನ ಕಣ್ಣುಗಳನ್ನು
ನಗರವೇ ಖಬರಸ್ಥಾನವಾಗಿರುವ ಈ ಮಣ್ಣಿನಲ್ಲಿ
ಆ ಕಣ್ಣುಗಳು ಸಿಗುವವರೆಗೂ
ನಿಮ್ಮ ಬಂದೂಕಿಗೆ ವಿರಾಮ ಕೊಡಿ:
ನೀರರ್ಗಲ್ಲಿನಂತೆ ಹಿಮಗಟ್ಟಿದೆ ನಮ್ಮ ದುಃಖ
ನಾಳೆ ಇದೇ ಕಣ್ಣುಗಳು ನಿಮ್ಮ ತಾಯಂದಿರ ಕಣ್ಣುಗಳನ್ನು
ಹುಡುಕಲು ನೆರವಾಗುತ್ತವೆ.

## ದೃಶ್ಯ: ಐದು

ಹೂವಾಗಿ ಅರಳಿವೆ ಗುಂಡೇಟಿನಿಂದ ನಮ್ಮ ಗಾಯಗಳು
ನೆತ್ತರಿನಲ್ಲಿ ತೋಯ್ದ ಹೂವುಗಳನ್ನು ಚಂದ್ರನಿಗೆ ಮುಡಿಸಿ
ಹೇಳುತ್ತೇವೆ:
ಕರೆದು ತಾ ವಸಂತವನ್ನು
ನಮ್ಮ ಗಾಯಗಳು ಮಾಯಲೆಂದು
ಕರೆದು ತಾ ಸೂರ್ಯನ ಕಿರಣಗಳನ್ನು
ನಮ್ಮ ನಗರ ಬೆಳಗಲೆಂದು
ನಮ್ಮ ನಿಷ್ಕಳಂಕ ಆಕಾಶವನ್ನು
ನೋವು ತುಂಬಿದ ಭೂಮಿಯನ್ನು
ಕರುಣೆಯ ಕೈಗಳಿಂದ ರಕ್ಷಿಸಿಕೊಳ್ಳುತ್ತೇವೆ.

